ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 22–09–2017

ಪ್ರಟಕಣೆಯ ಕೃಪೆಗಾಗಿ

**ಸಂಸ್ಕಾರವಿಲ್ಲದ ಶಿಕ್ಷಣ ಅಪೂರ್ಣ ಮತ್ತು ಅಪಾಯಕಾರಿ – ಪ್ರೊ. ಆರ್ ಎಂ ಚಿಂತಾಮಣಿ**

ಕೊಳ್ಳೇಗಾಲ 22–09–2017 : ಈ ದೇಶ ಹೆಚ್ಚಿನ ಸಂಖ್ಯೆಯಲ್ಲಿ ಯುವ ಸಮೂಹವನ್ನು ಹೊಂದಿರುವ ದೇಶ. ಆದರೆ ಇಂದಿನ ಯುವ ಜನತೆ ಸುಶಿಕ್ಷಿತರಾಗುತ್ತಿದ್ದಾರೆಯೇ ಹೊರತು ಸುಸಂಸ್ಕೃತರಾಗುತ್ತಿಲ್ಲ. ಸಹಿಷ್ಣುತೆ, ಪರೋಪಕಾರ, ಪ್ರಾಮಾಣಿಕತೆ, ವಿನಯ ಸಂಪನ್ನತೆ, ಸಾಮಾಜಿಕ ಕಳಕಳಿ, ಸಹಾನುಭೂತಿ ಮುಂತಾದ ಮೌಲ್ಯಗಳು ಇವರಲ್ಲಿ ಕಾಣಸಿಗುತ್ತಿಲ್ಲ ಎಂದು ಪ್ರೊ. ಆರ್ ಎಂ ಚಿಂತಾಮಣಿ, ಮಾಜಿ ನಿರ್ದೇಶಕರು, ಜೆಎಸ್‌ಎಸ್ ಸ್ನಾತಕೋತ್ತರ ಕೇಂದ್ರ ರವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ನಾತಕೋತ್ತರ ವಿಭಾಗದ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

ಸಂಸ್ಕಾರವಿಲ್ಲದ ಶಿಕ್ಷಣ ಅಪೂರ್ಣ, ಪುಸ್ತಕ ಜ್ಞಾನ ಮತ್ತು ಮಸ್ತಕ ಜ್ಞಾನಗಳ ನಡುವೆಯಿರುವ ವ್ಯತ್ಯಾಸವನ್ನು ಅರಿಯಬೇಕು. ವಿಶ್ವಾದ್ಯಂತ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿರುವ ಉಗ್ರರಲ್ಲಿ ಹೆಚ್ಚಿನವರು ಪದವೀಧರರು, ಸುಶಿಕ್ಷಿತರು. ಆದರೆ ಸುಸಂಸ್ಕೃತರಲ್ಲ. ಅಧ್ಯಯನದಿಂದ ಪಡೆವ ಜ್ಞಾನಕ್ಕಿಂತ ಅನುಭವ ಮತ್ತು ಸಂಸ್ಕಾರಗಳಿಂದ ಪಡೆವ ಜ್ಞಾನ ಮನುಷ್ಯನನ್ನು ಎತ್ತರಕ್ಕೆ ಕರೆದೊಯ್ಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಸುಸಂಸ್ಕೃತರನ್ನಾಗಿ ಬಾಳಲು ಕರೆ ನೀಡಿದರು.

ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪ್ರಭುರವರು ಮಾತನಾಡಿ ಹೆತ್ತವರಾದ ನಾವು ಮಕ್ಕಳಿಗೆ ಆಸ್ತಿ ಮಾಡುವ ಮತ್ತು ಹಣ ಕೂಡಿಡುವ ಬದಲು ಶಿಕ್ಷಣದ ಜೊತೆ ಜೊತೆಗೆ ಉತ್ತಮ ಸಂಸ್ಕಾರವನ್ನು ಕೊಟ್ಟಲ್ಲಿ ಮುಂದೆ ಅವರೇ ಈ ದೇಶದ ಬಹು ದೊಡ್ಡ ಆಸ್ತಿಗಳಾಗುತ್ತಾರೆ. ದಶಕದಿಂದೀಚೆಗೆ ಭಾರತೀಯ ಶಿಕ್ಷಣ ಪರಿವರ್ತನೆಯಾಗಿದ್ದು ಖಾಸಗಿ ಸಂಸ್ಥೆಗಳ ಆಗಮನದಿಂದ ಬೃಹತ್ ವಿಸ್ತರಣೆ ಕಂಡಿದೆ. ದೂರದೃಷ್ಠಿ ಹೊತ್ತ ಅನೇಕ ಧಾರ್ಮಿಕ ಸಂಸ್ಥೆಗಳು ಶಿಕ್ಷಣಕ್ಕೆ ಉತ್ತೇಜನ ನೀಡುತ್ತ ಸಂಸ್ಥೆಗಳನ್ನು ಸ್ಥಾಪಿಸುತ್ತಿರುವುದೂ ಒಳ್ಳೆಯದೆ. ಹಾಗಾಗಿ ವಿದ್ಯಾರ್ಥಿಗಳ ಭವಿಷ್ಯದ ಹಾದಿ ತೆರೆದಿವೆ. ಬದ್ದತೆ, ಗುರಿ, ಆತ್ಮವಿಶ್ವಾಸ, ನಿರಂತರ ಪರಿಶ್ರಮ ವಿದ್ಯಾರ್ಥಿಗಳಲ್ಲಿ ಇರಬೇಕಾಗಿದೆ ಎಂದು ತಿಳಿಸಿದರು.

ಪ್ರಾಚಾರ್ಯ ಪ್ರೊ ಉಮೇಶ ಅಧ್ಯಕ್ಷತೆ ವಹಿಸಿದ್ದರು. ಸ್ನಾತಕೋತ್ತರ ವಿಭಾಗದ ಅಧ್ಯಾಪಕರಾದ ಪ್ರೊ. ಪಿ ಮಹೇಶ್, ಪ್ರೊ. ಸರಸ್ವತಿ ಹಾಗೂ ಪ್ರೊ. ಎಂ ಅರ್ಚನ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು.


Freshers


Heartly Welcome To
Freshers

